**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ**

**ಎಸ್.ಸಿ. ನಂಃ 190/2022**

**ಪಿಡಬ್ಲೂಃ 08**

**ಸಿಡಬ್ಲೂಃ 08**

**ದಿನಾಂಕಃ 22-12-2023**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸವರಾಜ ರಾಠೋಡ |
| ತಂದೆ ಹೆಸರು | : | ಜಾನು |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಕೂಡಗಿ ತಾಂಡಾ |

**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

**(ಈ ದಿನ ನ್ಯಾಯಾಲಯಕ್ಕೆ 1 ನೇ ಆರೋಪಿ ಗೈರುಹಾಜರಾಗಿದ್ದು, ಆತನ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲವೆಂದು ಆತನ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.)**

**1)** ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರು ಹಾಗೂ ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಾದ **1** ನೇ ಆರೋಪಿ ನನಗೆ ಗೊತ್ತು ಅವರು ನಮ್ಮ ಊರಿನವರು ಇರುತ್ತಾರೆ. ಚಾಸಾ.**1** ರಘು ನನಗೆ ಸಂಬಂಧದಲ್ಲಿ ತಮ್ಮನಾಗಬೇಕು. ಚಾಸಾ.**4** ಮತ್ತು **5** ಚಾಸಾ.**1** ರವರ ತಂದೆ ತಾಯಿ ಇರುತ್ತಾರೆ. ಚಾಸಾ.**6, 7, 9** ರಿಂದ **13** ಇವರು ನನಗೆ ಗೊತ್ತು ಅವರು ನನ್ನ ಸಂಬಂದಿಕರು ಇರುತ್ತಾರೆ.

**2)** ಆರೋಪಿತರು ನನ್ನ ಜೊತೆಯಾಗಲೀ, ಚಾಸಾ.**1, 4** ರಿಂದ **7** ರವರ ಜೊತೆಯಾಗಲೀ ಯಾವುದೇ ಗಲಾಟೆ ಜಗಳ ಮಾಡಿರುವುದಿಲ್ಲ. ಆರೋಪಿಗಳು ನಮಗೆ ಕಲ್ಲುಗಳಿಂದ ಹಾಗೂ ಬಡಿಗೆಗಳಿಂದ ಹೊಡಿ ಬಡಿ ಮಾರುರುವುದಿಲ್ಲ. ಈಗ ಮೂರು ವರ್ಷಗಳ ಹಿಂದೆ ಒಂದು ದಿನ ಕೂಡಗಿ ತಾಂಡಾದಲ್ಲಿ ದುರ್ಗಾ ದೇವಿ ಜಾತ್ರೆ ನಡೆಯುತ್ತಿದ್ದಾಗ ಗುಂಪಿನಲ್ಲಿದ್ದ ನಮಗೆ ಕಲ್ಲು ಎಸೆದಿದ್ದರಿಂದ ಸಣ್ಣ ಪುಟ್ಟ ಗಾಯಗಳಾಗಿದ್ದು, ಆ ಕಾರಣಕ್ಕಾಗಿ ನಾವುಗಳು ವಿಜಯಪುರ ಬಿ.ಎಲ್.ಡಿ.ಇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇವೆ.

**3)** ಚಾಸಾ.**1** ರಘು ಆರೋಪಿಗಳ ಮೇಲೆ ಯಾವುದೇ ದೂರು ನೀಡಿರುವುದಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನಿಂದ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಪ್ರಕರಣದ ಬಗ್ಗೆ ನನಗೆ ಬೇರೆ ಯಾವುದೇ ಮಾಹಿತಿ ಇರುವುದಿಲ್ಲ.

**ಎಸ್.ಸಿ. ನಂಃ 190/2022**
**ಪಿಡಬ್ಲೂಃ 08**

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಪಿ.ಪಿ.ರವರು ಕೋರಿರುತ್ತಾರೆ. ವಾದ ಕೇಳಿ ಅನುಮತಿ ಕೊಡಲಾಯಿತು.)**

**<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

**4)** ಚಾಸಾ.**4** ಇವರು ಗ್ರಾಮ ಪಂಚಾಯತಿ ಅಧ್ಯಕ್ಷೆಯಾಗಿದ್ದ ಸಮಯದಲ್ಲಿ **2** ನೇ ಆರೋಪಿ ರಾಜು ಈತನು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗಟಾರ ಸ್ವಚ್ಛಗೊಳಿಸುವ ಗುತ್ತಿಗೆ ಮಾಡಿದ್ದು, ಅದರ ಹಣದ ಚೆಕ್ಕಿಗೆ ಚಾಸಾ.**4** ಇವರಿಗೆ ಸಹಿ ಮಾಡಲು **2** ನೇ ಆರೋಪಿ ಕೇಳಿಕೊಂಡಾಗ, ಚಾಸಾ.**4** ಇವರು ಅದನ್ನು ಪರಿಶೀಲಿಸಿ ಸಹಿ ಮಾಡುತ್ತೇನೆ ಎಂದು ಹೇಳಿರುತ್ತಾಳೆ ಎಂದರೆ ಸರಿಯಲ್ಲ. ಇದರಿಂದ **2** ನೇ ಆರೋಪಿಯು ಚಾಸಾ.**4** ರವರ ಮೇಲೆ ಸಿಟ್ಟಾಗಿ ಅವಳ ಜೊತೆ ಬಾಯಿ ಮಾತಿನ ಜಗಳ ಮಾಡಿದ್ದ ಎಂದರೆ ಸರಿಯಲ್ಲ.

**5)** ದಿ.**08.12.2021** ರಂದು **1** ನೇ ಆರೋಪಿಯನ್ನು ಕರೆದುಕೊಂಡು **2** ನೇ ಆರೋಪಿಯು ನಮಗೆ ಹೊಡೆಯುವ ಉದ್ದೇಶದಿಂದ ನಮ್ಮ ತಾಂಡಾಕ್ಕೆ ಬಂದು, **1** ನೇ ಆರೋಪಿ ಈತನು ತಾನು ಪೋಲಿಸ್ ಇರುತ್ತೇನೆ ಎಂದು ಹೇಳಿ, ಆತನ ಮನೆಯವರೆಲ್ಲರೂ ಕೂಡಿಕೊಂಡು ಬಡಿಗೆ ಕಲ್ಲುಗಳನ್ನು ತೆಗೆದುಕೊಂಡು ನಮ್ಮ ಹತ್ತಿರ ಬಂದು ನಮ್ಮನ್ನು ಸಾಯಿಸಿಬಿಡುತ್ತೇವೆ ಎಂದು ಹೇಳಿ, ಒಮ್ಮೆಲೆ ನಮ್ಮ ಮೇಲೆ ದಾಳಿ ಮಾಡಿ, ಚಾಸಾ.**1** ಹಾಗೂ ಆತನ ಕುಟುಂಬ ಸದಸ್ಯರಿಗೆ ಹೊಡಿ ಬಡಿ ಮಾಡಿ, ತಾನು ಕಾರು ತೆಗೆದುಕೊಂಡಿದ್ದೆ ನಿಮ್ಮನ್ನು ಸಾಯಿಸಲಿಕ್ಕಾಗಿ ಎಂದು ಬೈದು, ಸದರಿ ಕಾರನ್ನು ಚಾಸಾ.**1** ರವರನ್ನು ಖಲಾಸ ಮಾಡುವ ಉದ್ದೇಶದಿಂದ **1** ಮತ್ತು **2** ನೇ ಆರೋಪಿತರು ವೇಗವಾಗಿ ಚಲಾಯಿಸಿಕೊಂಡು ಬಂದು ಚಾಸಾ.**1** ಇವರಿಗೆ ಹಾಯಿಸಿದರು ಎಂದರೆ ಸರಿಯಲ್ಲ. ಸದರಿ ಗಲಾಟೆಯಲ್ಲಿ ಆರೋಪಿತರು ನನಗೂ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗಲಾಟೆಯಲ್ಲಿ ಚಾಸಾ.**1** ಇವರಿಗೆ ಕಾರು ಡಿಕ್ಕಿಯಾಗಿ ಆತನ ಎಡಗೈಗೆ, ಬಲಬಾಗದ ತೊಡೆಭಾಗಕ್ಕೆ ಮತ್ತು ಇತರ ಕಡೆ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ನನಗೆ ಹಾಗೂ ಚಾಸಾ.**1, 4** ರಿಂದ **7** ಇವರಿಗೆ ಆರೋಪಿರು ಕಲ್ಲು ಮತ್ತು ಬಡಿಗೆಗಳಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತಾಗಿಯೇ ನಾನು ಮತ್ತು ಇತರರು ಬಿ.ಎಲ್.ಡಿ.ಇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ಕುರಿತಂತೆ ಚಾಸಾ.**1** ರವರು ಆರೋಪಿಗಳ ವಿರುದ್ಧ ದೂರು ನೀಡಿರುತ್ತಾನೆ ಎಂದರೆ ಸರಿಯಲ್ಲ.

**ಎಸ್.ಸಿ. ನಂಃ 190/2022**
**ಪಿಡಬ್ಲೂಃ 08**

**6)** ಘಟನೆಯ ಕುರಿತಂತೆ ನಾನು ದಿ.**10.12.2021** ರಂದು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಾಕ್ಷಿಯು ಅಲ್ಲಗಳೆದಿದ್ದರಿಂದ ಅದನ್ನು ನಿ.ಪಿ.**11** ಎಂದು ಗುರುತಿಸಲಾಯಿತು.

**7)** ನಾನು ಘಟನೆಯ ಬಗ್ಗೆ ನಿ.ಪಿ.**11** ರಂತೆ ಹೇಳಿಕೆ ನೀಡಿದ್ದರೂ ಕೂಡ ಪ್ರಕರಣದಲ್ಲಿ ನಾವು ಮತ್ತು ಆರೋಪಿಗಳು ರಾಜಿ ಮಾಡಿಕೊಂಡಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಮ್.ಎಸ್.ಕೆ ವಕೀಲರಿಂದ:**

ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.